**ದಿಃ07.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲುಃ-**ಪ್ರತಿವಾದಿ **4** ರಿಂದ **7** ಪರ ಶ್ರೀ**. B.S.,**ವಕೀಲರಿಂದಃ-

ವಾದಿಗಳು ನಮ್ಮ ಊರಿನವರು ಆದ ಕಾರಣ ಪರಿಚಯ ಇರುತ್ತಾರೆ . ನಾನು ಬಿ.ಎ ವಿದ್ಯಾಭ್ಯಾಸ ಮಾಡಿರುತ್ತೇನೆ. ದಾವಾ ಆಸ್ತಿ ಸಂಕ್ರೆ ನಂಬರ್ 1/6 ಇರುತ್ತದೆ . ದಾವಾ ಆಸ್ತಿ ಸರ್ವೆ ನಂಬರ್ 1 ಎಷ್ಟು ಪೋಡು ಆಗಿರುತ್ತದೆ ನನಗೆ ಗೊತ್ತಿಲ್ಲ . ವಾದಿಯ ತಂದೆ ಬಸಪ್ಪ ರವರ ಬಸಪ್ಪ ರವರ ಅಣ್ಣ ತಮ್ಮಂದಿರು ಒಟ್ಟು 4 ಜನ ಇರುತ್ತಾರೆ . ಅವರ ಹೆಸರರುಗಳು ಬಸಪ್ಪ , ಸಂಗಪ್ಪ , ನಾಗಲಿಂಗಪ್ಪ ಮತ್ತು ಚನ್ನಬಸಪ್ಪ ಇರುತ್ತದೆ . ಸದರಿ 4 ಜನರವರಿಗೆ ಎಷ್ಟು ಜಮೀನು ಇರುತ್ತದೆ ನನಗೆ ಗೊತ್ತಿಲ್ಲ . ವಾದಿಯರ ಅಜ್ಜ ಹೆಸರು ನನಗೆ ಗೋತ್ತಿರುವುದಿಲ್ಲ . ಸದರಿ ವಾದಿಗಳ ಅಜ್ಜನ ಹೆಸರಿಗೆ ಜಮೀನುಗಳು ಇದ್ದ ಬಗ್ಗೆ ನನಗೆ ಗೋತ್ತಿಲ್ಲ . ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ವಾದಿ ಮತ್ತು ಪ್ರತಿವಾದಿಗಳ ಬಗ್ಗೆ ಪಾಲುವಿಭಾಗ ಆದ ಬಗ್ಗೆ ತಿಳಿಸಿದ್ದು ಅದು ಯಾವ ವರ್ಷದಂದು ಆದ ಬಗ್ಗೆ ನನಗೆ ಗೋತ್ತಿಲ್ಲ . ಒಂದು ವೇಳೆ ಮೌಖಿಕವಾಗಿ ಪಾಲುವಿಭಾಗ ಮಾಡಿಕೊಂಡಲ್ಲಿ ಅವರವರ ಹೆಸರಿಗೆ ಪಹಣಿಗಳು ಬದಲಾವಣೆ ಆಗಿರುತ್ತದೆ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಗಳ ತಂದೆ ಹೆಸರಿಗೆ ಪಹಣಿ ಬಂದಿದ್ದು ಅವರ ಮರಣಾ ನಂತರ ಅವರವರ ಮಕ್ಕಳಿಗೆ ಪೌತಿ ಖಾತೆ ಆಗಿರುತ್ತವೆ ಎಂದರೆ ಸರಿ. ಪಹಣಿಯಲ್ಲಿ ಯಾರು ಸ್ವಾಧೀನ ಇರುವ ಬಗ್ಗೆ ನಮೂದು ಇರುತ್ತದೆ ಎಂದರೆ ಸರಿ. ಪ್ರತಿವಾದಿ 7 ರವರ ತಂದೆ ಮರಣಾ ನಂತರ ದಾವಾ ಆಸ್ತಿಯು ಪ್ರತಿವಾದಿ 7 ರವರ ಹೆಸರಿಗೆ ಬಂದಿರುತ್ತದೆ ಎಂದರೆ ಸರಿ. ದಾವಾ ಆಸ್ತಿ ಪ್ರತಿವಾದಿ 7 ರವರ ಹೆಸರಿಗೆ ಪಹಣಿ ಬಂದ ನಂತರ ಅವರೇ ಅನುಭೋಗದಲ್ಲಿ ಇರುತ್ತಾರೆ ಎಂದರೆ ಸರಿ. ಯಾರ ಹೆಸರಿನಲ್ಲಿ ಪಹಣಿ ಇರುತ್ತದೆಯೋ ಅವರೇ ಸ್ವಾಧೀನ ಮತ್ತು ಮಾಲೀಕರಾಗಿ ಇರುತ್ತಾರೆ ಎಂದರೆ ಸರಿ. ಪ್ರತಿವಾದಿ 7 ರವರು ದಾವಾ ಆಸ್ತಿಯಲ್ಲಿ ಮನೆ ಕಟ್ಟಿಕೊಂಡು ಕಾಂಪೌಂಡ್ ಹಾಕಿ ತಿಪ್ಪೇ ಮತ್ತು ಇತರೆ ಸಾಮಾನುಗಳನ್ನು ಟ್ರಾಕ್ಟರ್ ನಿಲ್ಲಿಸಿಕೊಂಡು ಸ್ವಾಧೀನ ಇರುತ್ತಾರೆ ಎಂದರೆ ಸಾಕ್ಷಿ ವಾದಿ 3 ರವರು ಸ್ವಾಧೀನ ಇರುತ್ತಾರೆ ಎಂದು ಹೇಳುತ್ತಾರೆ . ನನ್ನ ಮುಖ್ಯ ವಿಚಾರಣೆಯಲ್ಲಿ ಇರುವ ಮಾಹಿತಿ ಬಗ್ಗೆ ನಾನು

ಯಾವುದೇ ದಾಖಲೆ ನೋಡಿರುವುದಿಲ್ಲ ಎಂದರೆ ಸರಿ. ನನ್ನನ್ನು ನ್ಯಾಯಾಲಯದಲ್ಲಿ ಸಾಕ್ಷಿ ಮಾಡಲು ವಾದಿ 3 ರವರು ಕರೆದಿರುತ್ತಾರೆ . ನನಗೆ ನ್ಯಾಯಾಲಯದ ಮೂಲಕ ಸಾಕ್ಷಿ ನೀಡಲು ಸಮನ್ಸ್ ಬಂದಿರುವುದಿಲ್ಲ . ನಮ್ಮ ಕುಟುಂಬ ಜಗಳೂರಿನಲ್ಲಿಇರುತ್ತದೆ ಎಂದರೆ ಸರಿಯಲ್ಲ . ನನಗೆ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಇರುವ ಮಾಹಿತಿ ಗೋತ್ತಿಲ್ಲದಿದ್ದರು ಸಹ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೇ ಎಂದರೆ ಸರಿಯಲ್ಲ. ಪಾಲುವಿಭಾಗ ಆದಗಿನಿಂದಲಾು ಪ್ರತಿವಾದಿ 7 ರವರು ದಾವಾ ಆಸ್ತಿಯಲ್ಲಿ ಸ್ವಾಧೀನ ಇರುತತಾರೆ ಎಂದರೆ ಸಾಕ್ಷಿ ವಾದಿ 3 ರವರು ಸ್ವಾಧೀನ ಇರುತ್ತಾರೆ ಎಂದು ಹೇಳುತ್ತಾರೆ .

<u>ಮರು ವಿಚಾರಣೆ:</u> ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

ಸಹಿ/-

ಸಿವಿಲ್ ನ್ಯಾಯಾಧೀಶರು, ಜಗಳೂರು